**ಕರ್ನಾಟಕ ವಿಧಾನ ಪರಿಷತ್ತು**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1290**

**ಮಾನ್ಯ ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**

**ಉತ್ತರಿಸಬೇಕಾದ ದಿನಾಂಕ : 15.03.2021**

**ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು.**

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಕೆಲವು ನಕಲಿ ವೈದ್ಯರು ವೈದ್ಯರೆಂದು ಹೇಳಿಕೊಂಡು ರೋಗ ನಿವಾರಣೆ ಮಾಡುವುದಾಗಿ ಜನರಿಗೆ ಮೋಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ, |
| ಆ) | ಇಂತಹ ನಕಲಿ ವೈದ್ಯರಿಂದ ಮೋಸಹೋದ ಕುರಿತು ದೂರುಗಳು ದಾಖಲಾಗಿವೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು) | ಬೆಂಗಳೂರು ನಗರ, ದಾವಣಗೆರೆ, ವಿಜಯಪುರ, ಚಿತ್ರದುರ್ಗ, ಗದಗ, ಚಿಕ್ಕಮಗಳೂರು, ಹಾವೇರಿ, ತುಮಕೂರು, ರಾಯಚೂರು, ಕೊಪ್ಪಳ, ಯಾದಗಿರಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ನಕಲಿ ವೈದ್ಯರಿಂದ ಮೋಸ ಹೋದ ಕುರಿತು ದೂರುಗಳು ದಾಖಲಾಗಿವೆ. |
| ಇ) | ನಕಲಿ ವೈದ್ಯರನ್ನು ಪತ್ತೆ ಹಚ್ಚಲು ಕೈಗೊಳ್ಳಲಾದ ಕ್ರಮಗಳೇನು; | ನಕಲಿ ವೈದ್ಯರುಗಳನ್ನು ಪತ್ತೆ ಹಚ್ಚಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು/ತಾಲ್ಲೂಕು ಆರೋಗ್ಯ ಅಧಿಕಾರಿಗಳು ಕೆ.ಪಿ.ಎಂ.ಇ. ಕಾಯ್ದೆಯಡಿ ಕ್ರಮ ಕೊಗೊಳ್ಳುತ್ತಿದ್ದಾರೆ. |
| ಈ) | ಪತ್ತೆ ಹಚ್ಚಿರುವ ವೈದ್ಯರ ಸಂಖ್ಯೆ ಎಷ್ಟು; ಹಾಗೂ ಇವರಿಗೆ ಯಾವ ಶಿಕ್ಷೆ ನೀಡಲಾಗಿದೆ? | ರಾಜ್ಯದಲ್ಲಿ ಇದುವರೆವಿಗೂ ಪತ್ತೆ ಹಚ್ಚಿರುವ ನಕಲಿ ವೈದ್ಯರ ಸಂಖ್ಯೆ 1669. ಈ ನಕಲಿ ವೈದ್ಯರ ಮೇಲೆ FIR ದಾಖಲಿಸಲಾಗಿದೆ. ಸದರಿ ನಕಲಿ ವೈದ್ಯರು ನಡೆಸುತ್ತಿದ್ದ ದವಾಖಾನೆಗಳನ್ನು ಕೆ.ಪಿ.ಎಂ.ಇ. ಅಧಿನಿಯಮದ ಅಡಿಯಲ್ಲಿ ಮುಚ್ಚಿಸಲಾಗಿದೆ. |

**ಸಂಖ್ಯೆ: ಆಕುಕ 18 ಎಸ್.ಟಿ.ಕ್ಯೂ 2021**

**(ಡಾ|| ಕೆ.ಸುಧಾಕರ್)**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು